# ಜಾಗತೀಕರಣದೊಂದಿಗೆ ಹೊಂದಿಕೊಂಡು ಬಾಳುವುದು ಹೇಗೆ?

ಎಮ್. ಎಸ್. ನಂಜುಂಡಯ್ಯ

### ಜಾಗತೀಕರಣದ ಆಯಾಮಗಳು

ಇತ್ತೀಚಿಗೆ ಕೆಲವು ವರ್ಷಗಳಿಂದ, ಜಾಗತೀಕರಣದ ಬಗ್ಗೆ ಹಲವು ರಂಗಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಬಹಳ ಪ್ರಸ್ತಾಪವಾಗುತ್ತಿವೆ. ಅದನ್ನು ನೋಡುವ ದೃಷ್ಟಿಕೋಣಗಳು ಬಗೆಬಗೆಯದಾಗಿರುತ್ತವೆ. ಕೆಲವರಿಗೆ ಜಾಗತೀಕರಣವೆಂದರೆ, ಪ್ರತಿಯೊಬ್ಬ ವ್ಯಕ್ತಿಯೂ ಮಾನವತೆಯ ಅಂಗ ಎಂದು ಭಾವಿಸುವುದೇ ಆಗಿದ್ದರೆ, ಮತ್ತೆ ಕೆಲವರು, ಬೃಹತ್ ಉದ್ಯಮ ಸಂಸ್ಥೆಗಳು ಸ್ವಂತ ಲಾಭಕ್ಕಾಗಿ ಅಭಿವೃದ್ಧಿಶೀಲ ದೇಶಗಳನ್ನು ಶೋಷಿಸುವ ಒಂದು ವ್ಯವಸ್ಥೆಯಷ್ಟೆ ಎಂದು ಇದನ್ನು ಭಾವಿಸುತ್ತಾರೆ. ಜಾಗತೀಕರಣಕ್ಕೆ ಹಲವು ಆಯಾಮಗಳಿವೆ. ಹೀಗಾಗಿ ಜಾಗತೀಕರಣ ಕೆಲಸಮಾಡುವ ವಿಧಾನ ಮತ್ತು ಅದರ ಹಲವು ಆಯಾಮಗಳನ್ನು ಸರಿಯಾಗಿ ತಿಳಿದುಕೊಳ್ಳುವುದು ಬಹಳ ಪ್ರಯೋಜನಕಾರಿ.

ತಾಂತ್ರಿಕತೆ, ಸಂಪರ್ಕ, ಅಂತರ್ಜಾಲ (internet), ಆರ್ಥಿಕ ಸುಧಾರಣೆ – ಈ ಕ್ಷೇತ್ರಗಳಲ್ಲಿ ನಡೆದಿರುವ ಅಪರಿಮಿತ ಪ್ರಗತಿಯಿಂದ ಇಂದು ಜಗತ್ತು ಕಿರಿದಾಗಿದೆ. ಜಗತ್ತಿನಾದ್ಯಂತ ಪಾರಸ್ಪರಿಕ ಸಂಬಂಧಗಳು (inter- connected) ಹಾಗೂ ಪಾರಸ್ಪರಿಕ ಅವಲಂಬನೆಗಳು (inter-dependence) ಜಾಸ್ತಿಯಾಗಿವೆ. ಜಾಗತೀಕರಣದ ಚರ್ಚೆ, ಬಹಳಷ್ಟು ಸಂದರ್ಭಗಳಲ್ಲಿ ಆರ್ಥಿಕ ವಿಚಾರಕ್ಕೆ ಸೀಮಿತವಾಗಿದ್ದರೂ, ಅದಕ್ಕೆ **ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಪರಿಸರಾತ್ಮಕ** ಆಯಾಮಗಳೂ ಇವೆ.

### ಸಕಾರಾತ್ಮಕ ಮತ್ತು ನಕಾರಾತ್ಮಕ ಪರಿಣಾಮಗಳು

ಇತ್ತೀಚಿನ ವರ್ಷಗಳಲ್ಲಿ, ಮಾರಾಟದ ವಸ್ತುಗಳು ಮತ್ತು ಸೇವಾ ಉದ್ಯೋಗಗಳು, ಬಂಡವಾಳ, ಉದ್ಯೋಗಿಗಳ ವಲಸೆ ಮತ್ತು ತಾಂತ್ರಿಕತೆಗಳು ಹೆಚ್ಚು ಸೀಮಾನಿರ್ಬಂಧವಿಲ್ಲದೆ ಪ್ರವಹಿಸುತ್ತ, ಜಾಗತಿಕ ವ್ಯಾಪಾರದ ಪ್ರಮಾಣ ಹಲವಾರು ಪಟ್ಟು ಹೆಚ್ಚಾಗಿದೆ. ಇದು ಜಾಗತೀಕರಣ, ಆರ್ಥಿಕ ಸುಧಾರಣೆ ಹಾಗೂ ಉದಾರೀಕರಣಗಳ ಸಕಾರಾತ್ಮಕ ಪರಿಣಾಮ. ಆದರೆ ಇವುಗಳನ್ನು ಒಂದು ಸುವ್ಯವಸ್ಥೆಗೆ ಒಳಪಡಿಸಬೇಕಾದ ಅಗತ್ಯವಿದೆ. ಏಕೆಂದರೆ ಹಲವಾರು ದೇಶಗಳು ಪ್ರಗತಿಯ ಬೇರೆ ಬೇರೆ ಹಂತಗಳಲ್ಲಿದ್ದು, ಅಭಿವೃದ್ಧಿಶೀಲ ದೇಶಗಳು ಮತ್ತೂ ಹಿಂದುಳಿಯಬಾರದು. ಎಲ್ಲ ದೇಶಗಳ ಜನರು ತಮ್ಮ ಸ್ವಹಿತವನ್ನೇ ಪ್ರಧಾನ ಆದ್ಯತೆಯನ್ನಾಗಿ ಮಾಡಿಕೊಳ್ಳುತ್ತಾರೆ, ಅದು ಸಹಜವೇ. ಅದರ ಪರಿಣಾಮವಾಗಿ, ಎಲ್ಲ ದೇಶಗಳ ಮತ್ತು ಎಲ್ಲ ಜನಗಳ ಹಿತಗಳನ್ನು ಕಾಪಾಡುವಂತಹ ಒಂದು ಜಾಗತಿಕ ವ್ಯವಸ್ಥೆಯ ಏರ್ಪಾಡು ಮಾಡುವುದು ವಿಶ್ವವ್ಯಾಪಾರ ಸಂಸ್ಥೆಯಂತಹ ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಒಂದು ದೊಡ್ಡ ಸವಾಲೇ ಆಗಿದೆ. ಇದರಿಂದ, ಆ ಸಂಸ್ಥೆಗಳು ಹತ್ತು ಹಲವು ಬಗೆಯ ಒತ್ತಡಗಳಿಗೆ ಸಿಲುಕಿ, ಈ ಸಂಬಂಧದ ಮಾತುಕತೆಗಳು ನಿಧಾನಗತಿಯಲ್ಲಿ ಸಾಗುತ್ತಿವೆ.

> **ಜಾಗತೀಕರಣವೆಂದರೆ ಏನು?**
>
> ರಾಷ್ಟ್ರಗಳ ಗಡಿಗಳನ್ನು ದಾಟಿ ಸಂಚರಿಸುತ್ತಿರುವ ಬಂಡವಾಳದ ಸಾಮಗ್ರಿಗಳ, ಸೇವೆಗಳ, ಮೌಲ್ಯಗಳ, ಭಾವನೆಗಳ, ಸಮ್ಮತಿ ಮತ್ತು ಅಸಮ್ಮತಿಗಳಿಂದ ಮಿಶ್ರಿತವಾಗಿರುವ, ಪರಸ್ಪರ ಅವಲಂಬನೆಯ ಅತ್ಯಂತ ಸಂಕೀರ್ಣವಾದ ಬಹುಸ್ತರಗಳ ತಾತ್ತ್ವಿಕ ಮತ್ತು ಪ್ರಾಯೋಗಿಕ ಪ್ರಕ್ರಿಯೆಯೇ ಜಾಗತೀಕರಣ.
> – *ಅನಾಮಿಕ*
>
> ವಿವಿಧ ದೇಶಗಳ ಪ್ರಾದೇಶಿಕ ಅರ್ಥವ್ಯವಸ್ಥೆಗಳ ಬೆಸಗೊಳ್ಳುವಿಕೆಯಿಂದ ಹೊರಹೊಮ್ಮುವ ವ್ಯವಸ್ಥೆಗೆ ಕಾರಣವಾಗಿರುವ ಜಾಗತಿಕ ಪ್ರಕ್ರಿಯೆಯೇ ಜಾಗತೀಕರಣ. – *ಗಿಡಿನ್ಸ್*
>
> ಜಾಗತಿಕವಾಗಿ ಹರಡಿರುವ ಆರ್ಥಿಕ ಚಟುವಟಿಕೆಗಳನ್ನು ಏಕೀಕರಣಗೊಳಿಸುವುದೇ ಜಾಗತೀಕರಣ ಕ್ರಿಯೆ. – *ಡಿಕನ್ಸ್*

ಜಾಗತೀಕರಣದಿಂದ ಆರ್ಥಿಕವಾಗಿ ಸಕಾರಾತ್ಮಕ ಹಾಗೂ ನಕಾರಾತ್ಮಕ ಪರಿಣಾಮಗಳು ಉಂಟಾಗಿವೆ. ಕೆಲವು ದೇಶಗಳು ಸಮೃದ್ಧವಾಗಿವೆ. ಕೆಲವು ದೇಶಗಳು ಹಲವು ರೀತಿಯಲ್ಲಿ ನಷ್ಟವನ್ನು ಅನುಭವಿಸುತ್ತಿವೆ. **ಜಾಗತಿಕ ಮಾರುಕಟ್ಟೆಗಳಿಗೆ ಸುಲಭ ಪ್ರವೇಶ, ಬಂಡವಾಳದ ಹೆಚ್ಚಳ, ತಾಂತ್ರಿಕ ಹಾಗೂ ಸಂಪರ್ಕ ಮಾಹಿತಿ, ವಿದೇಶೀ ಬಂಡವಾಳದ ಗಳಿಕೆ** – ಮುಂತಾದವುಗಳಿಂದ ಈ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಕೆಲವು ದೇಶಗಳಿಗೆ, ತಮ್ಮ ಆರ್ಥಿಕ ಸ್ಥಿತಿ ಹಾಗೂ ಪ್ರಜೆಗಳ ಜೀವನ ಮಟ್ಟವನ್ನು ಸುಧಾರಿಸಲು, ಜಾಗತೀಕರಣವು ಪ್ರಯೋಜನಕಾರಿಯಾಗಿದೆ. ಆದರೆ ಈ ವ್ಯವಸ್ಥೆಯು ವಿಜೇತರಾದವರನ್ನು ಹುಟ್ಟುಹಾಕಿರುವಷ್ಟೇ ಪರಾಜಿತರನ್ನೂ ಸೃಷ್ಟಿಸಿದೆ. ಮುಂದುವರಿದ ದೇಶಗಳ ಹಾಗೂ ಅಭಿವೃದ್ಧಿಶೀಲ ದೇಶಗಳ ಆರ್ಥಿಕ ಅಂತರ ಅಧಿಕವಾಗುತ್ತಿದೆ. ಅದಲ್ಲದೆ, ಒಂದೇ ದೇಶದಲ್ಲಿ, ಶ್ರೀಮಂತರ ಮತ್ತು ಬಡವರ ನಡುವಣ ಅಂತರ ಕೂಡ ಹೆಚ್ಚಾಗುತ್ತಿದೆ. ಆರ್ಥಿಕ ಸಾಮರ್ಥ್ಯ, ತಾಂತ್ರಿಕ ಪರಿಜ್ಞಾನ ಮತ್ತು ವಿಶಾಲ ಮಾರುಕಟ್ಟೆಗಳಿರುವ ಸಂಸ್ಥೆಗಳು, ಅದರಲ್ಲೂ ಬಹುರಾಷ್ಟ್ರೀಯ ಕಂಪನಿಗಳು ಹೆಚ್ಚು ಲಾಭಗಳಿಸುವತ್ತಲೇ ಒಲವು ತೋರಿಸುತ್ತಿರುವುದು ಕಂಡುಬರುತ್ತಿದೆ. ಇದರಿಂದ ಅಭಿವೃದ್ಧಿಶೀಲ ದೇಶಗಳ ಮತ್ತು ಸಮಾಜದ ದುರ್ಬಲ ವರ್ಗಗಳ ಹಿತಾಸಕ್ತಿಗಳಿಗೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕಾಗಿದೆ. ಅದಕ್ಕಾಗಿ, ಆಯಾ ಸರ್ಕಾರಗಳು ಮತ್ತು ಇತರ ಪಾಲುದಾರರು ಸ್ವಯಂಪ್ರೇರಿತರಾಗಿ ಮಧ್ಯೆ ಪ್ರವೇಶಿಸುವುದು ಅನಿವಾರ್ಯವಾಗಿದೆ. ಇದಕ್ಕಾಗಿ ಅಗತ್ಯ ಮಾಹಿತಿ ಹೊಂದಿದ್ದು, ವ್ಯವಸ್ಥಿತ ಸಂಘಟನೆ

ಇರುವ ಸರ್ಕಾರೇತರ ಸಂಸ್ಥೆಗಳು (Non-Government Organizations) ಒಗ್ಗಟ್ಟಿನಿಂದ ಕಾರ್ಯಶೀಲರಾಗಬೇಕು.

ಹಲವು ವಿದೇಶೀ ಕಂಪನಿಗಳು, ಕೆಲವು ದೇಶೀಯ ಜನರೊಡನೆ ಕೂಡಿಕೊಂಡು ನೀತಿಬಾಹಿರ ಕೃತ್ಯಗಳಲ್ಲಿ ತೊಡಗಿರುವ, ಅದರಲ್ಲೂ ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಮಿತಿಮೀರಿ ಬಳಸುವ ಪ್ರವೃತ್ತಿ ಹೆಚ್ಚುತ್ತಿದೆ. ಈ ಪ್ರಯತ್ನಗಳ ವಿರುದ್ಧ ಕಟ್ಟೆಚ್ಚರದಿಂದ ಇರುವುದು ಅನಿವಾರ್ಯ. ಇದರಿಂದ ಕಾಡುಗಳ ನಾಶ ಮುಂತಾದ ಭೀಕರ ಪರಿಣಾಮಗಳು ನಮ್ಮ ಪರಿಸರದಲ್ಲಿ ಉಂಟಾಗುತ್ತವೆ. ಅದಲ್ಲದೆ, ನಮ್ಮ ದೇಶೀಯ ಜ್ಞಾನವನ್ನು ಉಳಿಸಲು ನಾವು ಪ್ರಯತ್ನಿಸಬೇಕು. ಕೆಲವೊಮ್ಮೆ ಅವು ಅಧಿಕೃತವಾಗಿ ದಾಖಲಾಗದೆ, ವಿದೇಶೀ ಕಂಪನಿಗಳ ಸ್ವಾಮ್ಯಕ್ಕೆ (patent) ಒಳಪಡುವ ಅಪಾಯ ಇರುತ್ತದೆ. ಹೀಗಾಗಿ ಜಾಗರೂಕತೆಯಿಂದ ಇದ್ದರೆ, ವಿನಾಕಾರಣ ಶೋಷಣೆಗೆ ಒಳಗಾಗುವುದು ತಪ್ಪುತ್ತದೆ. ಇದನ್ನೇ ನಾವು ದೇಶೀಯ ವೈದ್ಯ ಪದ್ಧತಿಯ ಹಲವಾರು ಔಷಧಿಗಳ ಬಗ್ಗೆಯೂ ಹೇಳಬೇಕಾಗುವುದು.

ಇನ್ನೊಂದು ನಕಾರಾತ್ಮಕ ಬೆಳವಣಿಗೆಯೆಂದರೆ, ಭ್ರಷ್ಟಾಚಾರ, ಕಾನೂನುಬಾಹಿರ ಚಟುವಟಿಕೆಗಳು – ಇವುಗಳ ಹೆಚ್ಚಳದಿಂದ ಅನೇಕ ದೇಶಗಳಲ್ಲಿ ಸಾರ್ವಜನಿಕ ಮತ್ತು ಸರ್ಕಾರೀ ಅಧಿಕಾರಿಶಾಹಿ ದುರ್ಬಲವಾಗಿರುವುದು. ಇದರಿಂದಾಗಿ, ಅತ್ಯಂತ ಶಕ್ತ ಮತ್ತು ಪ್ರಭಾವಶಾಲಿಯಾದ ವಿದೇಶೀ ಸಂಸ್ಥೆಗಳು, ದೇಶೀಯ ವ್ಯವಹಾರಗಳಲ್ಲಿ ಹಿಂದೆಂದಿಗಿಂತಲೂ ಅತಿ ಹೆಚ್ಚು ಪ್ರವೇಶಾವಕಾಶವನ್ನು ಪಡೆಯಲು ಸಾಧ್ಯವಾಗಿದೆ. ಈ ವಿಷಯಗಳಲ್ಲಿ ಜನಹಿತದಲ್ಲಿ ತೊಡಗಿರುವ ಸಂಘಸಂಸ್ಥೆಗಳು ಮತ್ತು ವ್ಯಕ್ತಿಗಳು ಜಾಗರೂಕರಾಗಿರುವುದು ಒಳ್ಳೆಯದು.

ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಜಾಗತೀಕರಣದ ಪ್ರಭಾವ ಅಧಿಕವಾಗಿಯೇ ಇರುವುದನ್ನು ಕಾಣುತ್ತೇವೆ. ಮಾನವ ಹಕ್ಕುಗಳು, ಪ್ರಜಾಪ್ರಭುತ್ವ, ಗಂಡು–ಹೆಣ್ಣುಗಳ ಸಮಾನತೆ ಮುಂತಾದ ವಿಷಯಗಳಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕಾದುದು ಅವಶ್ಯಕ. ಇಂದಿನ ಸಮಾಜದಲ್ಲಿ ಟಿ.ವಿ., ಇಂಟರ್‌ನೆಟ್, ಮೊಬೈಲ್ ಫೋನ್ ಮುಂತಾದ ಸಮೂಹ ಮಾಧ್ಯಮಗಳು ಹೆಚ್ಚು ಹೆಚ್ಚು ಜನರಿಗೆ ತಲುಪುತ್ತಿರುವುದರಿಂದ ಮೇಲಿನ ಸಾಮಾಜಿಕ ವಿಷಯಗಳ ಬಗ್ಗೆ ಅವರಲ್ಲಿ ಅರಿವು ಕೂಡ ಹೆಚ್ಚುತ್ತಿರುವುದನ್ನು ನಾವು ಕಾಣುತ್ತೇವೆ. ಒಂದೆ ಕೇವಲ ಕೆಲವೇ ಜನರಿಗೆ ಮೀಸಲಾಗಿದ್ದ ಜೀವನದ ಎಲ್ಲ ಕ್ಷೇತ್ರಗಳನ್ನು ಒಳಗೊಂಡ ಮಾಹಿತಿಗಳು, ವಿದೇಶೀ ಸುದ್ದಿಗಳು ಇಂದು ಎಲ್ಲರಿಗೂ ದೊರಕುವಂತಾಗಿದೆ. ಅದರಿಂದ ಮನೋರಂಜನೆ ಮತ್ತು ಸಾಂಸ್ಕೃತಿಕ ವಿನಿಮಯ ಕೂಡ ಸಾಧ್ಯವಾಗಿದೆ. ಸಾಮಾನ್ಯ ಜನರೇ ಅವಶ್ಯಕ ಮಾಹಿತಿಗಳನ್ನು ಪ್ರಸರಿಸುತ್ತ, ಸುದ್ದಿಗಾರರಂತೆ ಕಾರ್ಯನಿರ್ವಹಿಸುತ್ತಿರುವುದು ಈ ಸಮೂಹ ಮಾಧ್ಯಮಗಳು ಜನರಿಗೆ ಕೊಟ್ಟಿರುವ ತಾಂತ್ರಿಕಶಕ್ತಿಯ ದ್ಯೋತಕವಾಗಿದೆ.

ವಾಣಿಜ್ಯಾವಕಾಶಗಳನ್ನು ವಿಸ್ತರಿಸುವ ಒಂದೇ ಗುರಿಯಿಟ್ಟುಕೊಂಡು, ನೈಸರ್ಗಿಕ ಸಂಪನ್ಮೂಲಗಳನ್ನು ಮಿತಿಮೀರಿ ಬಳಸುತ್ತಿರುವುದರಿಂದ ಪರಿಸರದ ಮೇಲೆ ಆಗುತ್ತಿರುವ ಭೀಕರ ಪರಿಣಾಮ ನಮ್ಮನ್ನು ಚಿಂತೆಗೀಡುಮಾಡುವ ವಿಷಯ. ಅದರ ದೂರಗಾಮೀ ದುಷ್ಪರಿಣಾಮಗಳ ಬಗ್ಗೆ ನಿಗಾ ಇಡುವುದು ಅತ್ಯಂತ ಅವಶ್ಯಕ.

**ಟೆಲಿಫೋನ್, ಟೆಲಿವಿಷನ್, ಮತ್ತು ಇಂಟರ್‌ನೆಟ್ – ಈ ಮೂರರ ಸಮಾಗಮ ದೂರದ ಅವಸಾನವನ್ನು ಸಾರಿದೆ. ಭೂಗೋಳದ ಹಿಡಿತದಿಂದ ಮನುಕುಲ ಮುಕ್ತವಾಗಿದೆ. ಗಡಿಗಳು ಮತ್ತು ಅಡೆತಡೆಗಳು ಮುರಿದು ಬಿದ್ದಿವೆ.**

*– ಫ್ರೇನ್ಸ್ ಕ್ರೈರನ್ ಕ್ರಾಸ್*

**ಕಾರ್ಖಾನೆ ಆಧಾರಿತ ಅರ್ಥವ್ಯವಸ್ಥೆಯಿಂದ ಕಂಪ್ಯೂಟರ್ ಆಧಾರಿತ ಅರ್ಥವ್ಯವಸ್ಥೆಗೆ ನಡೆದಿರುವ ಮಾರ್ಪಾಡು, ಎಂಟು ನೂರು ವರ್ಷಗಳ ಹಿಂದೆ, ಕೃಷಿ ಆಧಾರಿತ ಆರ್ಥಿಕ ಸ್ಥಾಪನೆಯಿಂದ, ಕಾರ್ಖಾನೆ ಆಧಾರಿತ ಆರ್ಥಿಕ ವ್ಯವಸ್ಥೆಗಿಂತ ಮಹತ್ತರವಾದುದು**

*– ಶಿಲ್ ಸಿಂಗರ್*

**ಸಂಪರ್ಕ ತಂತ್ರಜ್ಞಾನ ಜಾಗತಿಕ ಸಮುದಾಯದ ಬೆಳವಣಿಗೆಗೆ ಅಗತ್ಯವಷ್ಟೇ ಅಲ್ಲ, ಅನಿವಾರ್ಯವಾಗಿದೆ**

*– ಅನಾಮಿಕ*

### ವ್ಯಾಪಕ ಅವಕಾಶವಾಗಿ ಜಾಗತೀಕರಣ

ಜಾಗತೀಕರಣಕ್ಕೆ ವೈಯಕ್ತಿಕವಾಗಿ ಹಾಗೂ ಸಾಂಘಿಕವಾಗಿ ಹೇಗೆ ಹೊಂದಿಕೊಳ್ಳಬೇಕು? ಅದು ತಂದೊಡ್ಡಿರುವ ಭಯ ಮತ್ತು ಅಭದ್ರತೆ (Fear & insecurity) ಗಳನ್ನು ಹೋಗಲಾಡಿಸಿ, ಜಾಗತೀಕರಣವನ್ನು ಹೇಗೆ ಒಂದು ವ್ಯಾಪಕ ಅವಕಾಶವಾಗಿ ಬಳಸಿಕೊಳ್ಳಬೇಕು ಎಂಬುದು ಇವತ್ತಿನ ದೇಶಾಭಿಮಾನಿಗಳು ಹಾಗೂ ಜನಹಿತ ಸಂಸ್ಥೆಗಳ ಮುಂದಿರುವ ದೊಡ್ಡ ಸವಾಲು. ಈ ದಿಸೆಯಲ್ಲಿ ಕೆಲವು ಸೂಚನೆಗಳು ಹೀಗಿವೆ:

**ಮಾಧ್ಯಮಗಳ ಮಾಹಿತಿ:** ರೇಡಿಯೋ, ಟಿ.ವಿ. ಮುಂತಾದ ಸಮೂಹ ಮಾಧ್ಯಮಗಳು, ಕಂಪ್ಯೂಟರ್ ಮತ್ತು ಇಂಟರ್‌ನೆಟ್ – ಮುಂತಾದ ಸಂಪರ್ಕ ಸಾಧನಗಳು ನಮ್ಮ ಜೀವನಶೈಲಿಯ ಮೇಲೆ ಅಗಾಧ ಪ್ರಭಾವ ಬೀರುತ್ತಿವೆ. ಆದರೆ, ಈ ಮಾಧ್ಯಮಗಳ ಮೂಲಕ ದೊರಕುವ ಮಾಹಿತಿಗಳ ಸತ್ಯಾಸತ್ಯತೆಯನ್ನು, ನಂಬಲರ್ಹ ಆಕರಗಳಿಂದ, ಖಾತರಿ ಪಡಿಸಿಕೊಂಡು, ಇವುಗಳ ಪ್ರಯೋಜನ ಪಡೆದುಕೊಳ್ಳಬೇಕು. ಈ ಮಾಹಿತಿಗಳ ನಿಖರತೆ ಅಥವಾ ಕಳಪೆತನವನ್ನು, ನಿರ್ದುಷ್ಟವಾಗಿ ಬೇರ್ಪಡಿಸುವ ಕುಶಲತೆಯನ್ನು ಇವತ್ತಿನ ವಿದ್ಯಾಭ್ಯಾಸದಲ್ಲಿ ನಾವು ಅಳವಡಿಸಬೇಕಾಗಿದೆ.

**ವಿದ್ಯಾಭ್ಯಾಸದಲ್ಲಿ ಜಾಗತೀಕರಣದ ಪ್ರಭಾವ** : ಈಗ ಲಭ್ಯವಿರುವ ಅಗಾಧ ಮಾಹಿತಿಗಳನ್ನು ಇಂಟರ್‌ನೆಟ್ ಮತ್ತು ಇತರ ಮಾಧ್ಯಮಗಳ ಮೂಲಕ ಪರಿಣತಜನರೊಡನೆ ವಿನಿಮಯ ಮಾಡಿಕೊಳ್ಳಬಹುದು. ಲಭ್ಯವಿರುವ ಕಾಲದ ಮಾಹಿತಿ (Real Time

Information) ಮತ್ತು ಮಾಹಿತಿಗಳ ನಿರಂತರ ಪರಿಷ್ಕರಣ (Constant Updating) ಸೌಲಭ್ಯ ಈಗ ಎಲ್ಲರಿಗೂ ಸಿಗುತ್ತದೆ. ಇವು **ಜ್ಞಾನವೃದ್ಧಿ** ಮತ್ತು **ಉದ್ಯೋಗ ಕೌಶಲ ವೃದ್ಧಿಗೆ** ಸಹಕಾರಿಯಾಗಿವೆ. ಪ್ರತಿಷ್ಠಿತ ಹಾಗೂ ವಿಶ್ವಾಸಾರ್ಹ ಸಂಸ್ಥೆಗಳಿಂದ ದೊರೆಯುವ ಪರಿಷ್ಕೃತ ಮಾಹಿತಿಗಳು ಹಾಗೂ ಅಧ್ಯಯನಗಳನ್ನು ವಿದ್ಯಾಸಂಸ್ಥೆಗಳು ಮತ್ತು ಸರ್ಕಾರೇತರ ಸೇವಾ ಸಂಸ್ಥೆಗಳು ಸಕಾರಾತ್ಮಕವಾಗಿ ಬಳಸಿಕೊಂಡು ಪರಿಣಾಮಕಾರಿಯಾಗಿ ವಿದ್ಯಾ ಪ್ರಸಾರವನ್ನು ಮಾಡಬಹುದು. ಇದಕ್ಕಾಗಿ ಲಭ್ಯವಿರುವ ಜಾಗತಿಕ ಸಂಪನ್ಮೂಲಗಳನ್ನು ಮತ್ತು ಪರಿಣತರ ಅನುಭವಗಳನ್ನು ಬಳಸಿಕೊಂಡು ಸಮಾಜವು ಅಭಿವೃದ್ಧಿ ಪಥದಲ್ಲಿ ಸಾಗಬಹುದು. ಆದರೆ ಇಲ್ಲೊಂದು ಎಚ್ಚರಿಕೆ. ಲಭ್ಯವಿರುವ ಮಾಹಿತಿಗಳು ಬೃಹತ್ ಗಾತ್ರದ್ದಾಗಿವೆ. ಅವುಗಳಲ್ಲಿ ಯಾವುದು ಉಪಯೋಗಕಾರಿ, ಯಾವುದು ಅಲ್ಲ ಎನ್ನುವ ಪರಿಜ್ಞಾನ ಇರಬೇಕಾದ್ದು ಅತ್ಯವಶ್ಯಕ. ಈ ಬಗೆಯ ವಿವೇಕಬುದ್ಧಿಯನ್ನು ಜನಗಳಲ್ಲಿ ಹರಡುವಲ್ಲಿ, ಸರ್ಕಾರೇತರ ಸಂಸ್ಥೆಗಳು ಮಹತ್ವದ ಪಾತ್ರವನ್ನು ವಹಿಸಬೇಕು. ಆ ಮಾಹಿತಿಗಳನ್ನು ಸರಿಯಾಗಿ ಉಪಯೋಗಿಸಿ, ಜನೋಪಕಾರಿ ರಚನಾತ್ಮಕ ಕಾರ್ಯಕ್ರಮಗಳನ್ನು ಮೇಲೆ ಹೆಸರಿಸಿದ ಸಂಘ ಸಂಸ್ಥೆಗಳು ಹಮ್ಮಿಕೊಳ್ಳಬೇಕು. ಇದರಿಂದ ಸಾಮಾನ್ಯ ಜನರ ಕಲ್ಯಾಣ ಸಾಧ್ಯವಾಗಬೇಕು.

**ವೈದ್ಯಕೀಯ ಸೌಲಭ್ಯಗಳ ಆಧುನೀಕರಣ :** ರೋಗ ಚಿಕಿತ್ಸೆಯ ಸಲುವಾಗಿ ಇವತ್ತು ಆಧುನಿಕ ತಂತ್ರಜ್ಞಾನದ ಸಹಾಯದಿಂದ ಟೆಲಿಮೆಡಿಸಿನ್ (Tele-medicine) ಮೂಲಕ ಪ್ರಪಂಚಾದ್ಯಂತ ಇರುವ ಪ್ರತಿಷ್ಠಿತ ಆಸ್ಪತ್ರೆ ಮತ್ತು ಇತರ ವೈದ್ಯಕೀಯ ಸಂಶೋಧನಾ ಸಂಸ್ಥೆಗಳ ನಡುವಿನ ಸಂಪರ್ಕ ಸಾಧ್ಯವಾಗಿದೆ. (*ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಬುಡಕಟ್ಟು ಜನರ ಮಧ್ಯೆ ಕಾರ್ಯ ಮಾಡುತ್ತಿರುವ ವಿವೇಕಾನಂದ ಯೂತ್ ಮೂವ್‌ಮೆಂಟ್ ನಡೆಸುತ್ತಿರುವ ಆಸ್ಪತ್ರೆಗಳಲ್ಲಿ, ಗ್ರಾಮೀಣ ಪ್ರದೇಶದ ಜನಗಳಿಗೂ ಕೂಡ ಈ ಬಗೆಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ – ಸಂ.*) ಮಕ್ಕಳು ಮತ್ತು ತಾಯಿಯರ ಆರೋಗ್ಯ, ರೋಗ ನಿರೋಧಕಗಳು ಮತ್ತು ಸಾಮಾನ್ಯ ಆರೋಗ್ಯದ ಬಗ್ಗೆ ಹೆಚ್ಚು ಅರಿವು ಮೂಡಿಸಲು, ಹಿಂದುಳಿದವರಿಗೆ ಸಹಾಯ ಒದಗಿಸಲು ಸರ್ಕಾರೇತರ ಸೇವಾಸಂಸ್ಥೆಗಳು (NGOs) ಇವುಗಳನ್ನು ಬಳಸಿಕೊಂಡು ರಚನಾತ್ಮಕ ಪಾತ್ರ ವಹಿಸಬಹುದು.

**ಹೊಸ ಉದ್ಯೋಗಾವಕಾಶಗಳು :** ಜಾಗತೀಕರಣ ಹಲವಾರು ಉದ್ಯೋಗ ಅವಕಾಶಗಳನ್ನೂ ಕಲ್ಪಿಸಿಕೊಟ್ಟಿದೆ. ಹೊರಗುತ್ತಿಗೆ (Outsourcing) ಅಥವಾ ಹೊರಗೆಲಸ ಪೂರೈಕೆ (Supply-Chain management) ಮುಂತಾದ ಹೊಸ ತರಹದ ಉದ್ಯೋಗಗಳನ್ನು ಒದಗಿಸುವ ಪ್ರತಿಷ್ಠಿತ ಸಂಸ್ಥೆಗಳು ಬೆಳೆದಿವೆ. ದೇಶವಿದೇಶಗಳಲ್ಲಿರುವ ಪರಿಣತರನ್ನು ಇಂಟರ್‌ನೆಟ್ ಮೂಲಕ ಸಂಪರ್ಕಿಸಿ ಜೀವನ ಕೌಶಲವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು. ಉದ್ಯೋಗದಲ್ಲಿ ಬದಲಾವಣೆ ಹಾಗೂ ಹೊಸ ವಿಧದ ಉದ್ಯೋಗಗಳ

> **ಕೃಷಿ ಪ್ರಗತಿಯಲ್ಲಿ ಪಸರಿಸುತ್ತಿರುವ ಮಾಹಿತಿ ತಂತ್ರಜ್ಞಾನ ಸಮಾಜದ ಕಟ್ಟಕಡೆಯ ಜನಸಮುದಾಯವನ್ನು ತಲುಪದಿದ್ದರೆ, ಅದು ಇನ್ನೊಂದು ಪುರೋಹಿತಶಾಹಿ ವ್ಯವಸ್ಥೆಯಾಗುವ ಅಪಾಯವಿದೆ.**
>
> – *ಪ್ರೊ. ಬರಗೂರ್*
>
> **ಅಮೆರಿಕನ್ ಅಭಿರುಚಿಗಳನ್ನು, ಮೌಲ್ಯಗಳನ್ನು ವಿಷ್ಯಾದ ಟಿ.ವಿ. ವೀಕ್ಷಕರ ಮೇಲೆ ಹೇರುವುದು ಅಸಾಧುವಷ್ಟೇ ಅಲ್ಲ, ಅಸಾಧ್ಯ ಕೂಡ.**
>
> –*ರೂಪರ್ಟ್ ಮರ್ಡೋಕ್* (ಉಪಗ್ರಹ ಟಿ.ವಿ. ದೊರೆ)
>
> **ಅಮೆರಿಕನ್ ಅಭಿರುಚಿಗಳು, ನಡವಳಿಕೆಗಳು, ಸ್ವಭಾವಗಳು ಇಡೀ ಜಗತ್ತಿನ ಮಾನಸಿಕ ಪ್ರಕೃತಿಯನ್ನು ಬದಲಾಯಿಸಿ, ಪ್ರಪಂಚ ಒಂದೇ ರೀತಿಯ ಜಡ, ಬರಡು, ಸಂಸ್ಕೃತಿಯ ತಾಣವಾಗಿ ಮಾರ್ಪಡುವ ಸಾಧ್ಯತೆಗಳು ಎದ್ದುಕಾಣುತ್ತಿವೆ.** –*ಒಬ್ಬ ಬರಹಗಾರ*

ಹುಡುಕಾಟ ಈಗ ಅಗತ್ಯವಾಗಿದೆ. ಇದು ಕೂಡ ಇಂಟರ್‌ನೆಟ್ ಮೂಲಕ ಸಾಧ್ಯವಾಗುತ್ತಿದೆ.

**ಕೃಷಿ ಮಾಹಿತಿ ಸೌಲಭ್ಯ :** ಜಾಗತೀಕರಣದ ದೆಸೆಯಿಂದ ಕೃಷಿ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರ, ತಾಂತ್ರಿಕ ನೆರವು, ಸುಧಾರಿತ ಕೃಷಿ ಪದ್ಧತಿ, ಮತ್ತು ಸಲಕರಣೆಗಳ ಮಾಹಿತಿಗಳನ್ನು ದೇಶವಿದೇಶಗಳಿಂದ ಪಡೆಯಲು ಸಾಧ್ಯವಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ಸಂಪರ್ಕಿಸುವ ಹಾಗು ಬೆಲೆಗಳ ಮಾಹಿತಿ ತಿಳಿಯುವ ಆಧುನಿಕ ಮಾಹಿತಿ ತಂತ್ರಜ್ಞಾನದ ಸೌಲಭ್ಯಗಳು ಗ್ರಾಮೀಣ ಕೃಷಿಕರಿಗೆ ವರದಾನವಾಗಲಿವೆ.

**ವೈಜ್ಞಾನಿಕ ಆವಿಷ್ಕಾರ:** ಜೈವಿಕ ತಂತ್ರಜ್ಞಾನ(Biotechnology), ಅತಿಸೂಕ್ಷ್ಮ ತಂತ್ರಜ್ಞಾನ(Nano- Technology) ಮುಂತಾದ ಹೊಸ ಕ್ಷೇತ್ರಗಳಲ್ಲಿ, ಔದ್ಯೋಗಿಕ ಪ್ರಗತಿ ಹಾಗೂ ಹೊಸ ಆವಿಷ್ಕಾರಗಳು ಜಾಗತಿಕ ಮಟ್ಟದಲ್ಲಿ ಆಗುತ್ತಿವೆ. ಇವುಗಳ ಮಾಹಿತಿ ಮತ್ತು ವಿನಿಮಯ ಕೂಡ ಈಗ ಸಾಧ್ಯವಾಗಿದೆ. ಇದರಿಂದ ಹೊಸ ಔಷಧಿಗಳ ಆವಿಷ್ಕಾರ, ಸುಧಾರಿತ ವೈದ್ಯಕೀಯ ವಿಧಾನಗಳು ಮತ್ತು ಸಲಕರಣೆಗಳ ಬೆಳವಣಿಗೆ ನಮಗೆ ಇಂದು ದೊರೆಯುತ್ತಿರುವುದು ಜಾಗತೀಕರಣದ ಫಲವಾಗಿ ಸಾಧ್ಯವಾಗಿದೆ.

**ಮನೋರಂಜನೆ ಮಾಧ್ಯಮ:** ಮನೋರಂಜನೆಯ ಮಾಧ್ಯಮದ (Entertainment) ಕ್ಷೇತ್ರದಲ್ಲಿ ಜಾಗತೀಕರಣದ ನಕಾರಾತ್ಮಕ ಪರಿಣಾಮವನ್ನು ನಾವು ಬಹಳಷ್ಟು ಕಾಣುತ್ತೇವೆ. ಮನರಂಜನೆಯ ಹೆಸರಿನಲ್ಲಿ, ಮಾಧ್ಯಮಗಳು ಹರಡುತ್ತಿರುವ "*ಅಮೆರಿಕೀಕರಣ*"ದ (Americanization) ಪ್ರಕ್ರಿಯೆಯು, ಅಗೋಚರವಾಗಿ ಹರಡುವ ರೋಗದಂತೆ, ಇತರ ದೇಶಗಳ ಸಂಸ್ಕೃತಿ ಮತ್ತು ಮೌಲ್ಯಗಳ ಮೇಲೆ ಬಹಳಷ್ಟು ದುಷ್ಟ ಪರಿಣಾಮಗಳನ್ನು ಬೀರುತ್ತಿದೆ. ಯುವಕರು ಮತ್ತು ಮಕ್ಕಳ ಮೇಲೆ ಇದರ ಭ್ರಷ್ಟ ಪರಿಣಾಮವಾಗದಂತೆ ನಮ್ಮ ಪ್ರಸಾರಮಾಧ್ಯಮಗಳ ನಿರ್ವಹಣೆಯನ್ನು ಮಾಡಬೇಕು. ಇದನ್ನು ಬಹಳ ಜಾಗರೂಕತೆಯಿಂದ ಮಾಡುವುದು ಆವಶ್ಯಕ. ಇಲ್ಲದಿದ್ದರೆ ನಮ್ಮ ಭವ್ಯ ಭಾರತೀಯ ಪರಂಪರೆ ಹಾಗೂ ವ್ಯಾಪಕವಾದ ಸಾಂಸ್ಕೃತಿಕ ವೈವಿಧ್ಯತೆಗೆ ಕುಂದುಂಟಾಗುವುದು.

### ಜಾಗತೀಕರಣದ ಮಾನವೀಯ ಮತ್ತು ಆಧ್ಯಾತ್ಮಿಕ ಭಾವನೆಗಳು

೧. ದಾರ್ಶನಿಕರ, ಮಹಾನ್ ಕವಿಗಳ, ಮೇಧಾವಿಗಳ ಚಿಂತನೆಯ ಮೂಸೆಯಲ್ಲಿ ಪರಿಕಲ್ಪಿತವಾಗಿರುವ, ಮಾನವನ ನಾಗರಿಕತೆ ಸಂಸ್ಕೃತಿಗಳನ್ನು ಉದಾತ್ತೀಕರಿಸುವ ಒಂದೇ ಪ್ರಪಂಚ, ವಿಶ್ವಪ್ರಜೆ, ವಿಶ್ವಮಾನವ - ಈ ಭಾವನೆಗಳ ಸಾಕಾರದ ಸಾಮೀಪ್ಯಕ್ಕೆ ಕೊಂಡೊಯ್ಯುವ, ಮಾನವ ಬೆಳವಣಿಗೆಯ ಪ್ರಬುದ್ಧ ಘಟ್ಟವನ್ನು ಸಂಕೇತಿಸುವ ಪ್ರಕ್ರಿಯೆಯೇ ಜಾಗತೀಕರಣ

೨. "ಅಂಜಿಕೆಯಿಲ್ಲದ ಮನಸ್ಸು, ಬಾಗದಿರದ ಶಿರ, ಮುಕ್ತವಾದ ತಿಳಿವು, ಕ್ಷುದ್ರ ಗೃಹಭಿತ್ತಿಗಳ ಧ್ವಂಸ, ನಿಜದ ಅಂತರಾಳದಿಂದ ಹೊಮ್ಮಿಸೂಸುವ ಧ್ವನಿಪೂರ್ಣತೆಯತ್ತ ಕರ್ಮದ ಹರಿವು, ತಿಳಿ ವಿಚಾರ, ಚಿರ ವಿಕಾಸದ ಬುದ್ಧಿ - ಇವುಗಳಿಂದ ಕೂಡಿದ ಮಾನವರ ವಿಶ್ವದ ಉದಯ" *- ರಾಷ್ಟ್ರಕವಿ ರವೀಂದ್ರನಾಥ ಠಾಕೂರ್*

೩. "ನೂರು ಮತದ ಹೊಟ್ಟು ತೂರಿ, ಎಲ್ಲ ತತ್ತ್ವದೆಲ್ಲೆ ಮೀರಿ, ನಿರ್ದಿಗಂತವಾಗಿ ಏರಿ, ಹೇ ಮಾನವ ಚೇತನ! ನೀ ಅನಿಕೇತನನಾಗು, ವಿಶ್ವವ್ಯಾಪಿಯಾಗು" *- ರಾಷ್ಟ್ರಕವಿ ಕುವೆಂಪು*

### ಜಾಗತೀಕರಣದ ಮಾನವೀಕರಣ

ಜಾಗತೀಕರಣ ಪ್ರಕ್ರಿಯೆ ಆರಂಭವಾದಾಗ ಅದರ ಬಗ್ಗೆ ಇದ್ದ ಅತ್ಯುತ್ಸಾಹದ ಆಶಾಭಾವನೆ ಈಗ ಕಾಣಬರುವುದಿಲ್ಲ. ಆದ್ದರಿಂದ ಇದನ್ನು ಮಾನವಭಾವನೆಗಳಿಗೆ ಮಾನ್ಯತೆ ಕೊಡುವ ಮಾನವೀಕರಣ (Humanize) ಪ್ರಕ್ರಿಯೆಗೆ ಒಳಪಡಿಸುವ ಅಗತ್ಯವಿದೆ. ಈಗ ಜಾಗತೀಕರಣ ಬೆಳೆಸುವ ಕೊಳ್ಳುಬಾಕ ಸಂಸ್ಕೃತಿಯನ್ನು(consumerism) ಪ್ರೋತ್ಸಾಹಿಸಿದುದಕ್ಕೆ ತೆರ ಬೇಕಾದ ಬೆಲೆಯ ಬಗ್ಗೆ ನಮ್ಮ ಜನರಲ್ಲಿ ಅರಿವು ಮೂಡ ಬೇಕಾಗಿದೆ. ಅದಲ್ಲದೆ, ದೇಶೀಯ ಮತ್ತು ಜಾಗತಿಕ ಹಿತಾಸಕ್ತಿಗಳೆರಡನ್ನೂ ಸರಿದೂಗಿಸುವ ಸಮನ್ವಯ ವ್ಯವಸ್ಥೆಯೊಂದನ್ನು ನೀತಿನಿರ್ಧಾರಕರು ರೂಪಿಸಬೇಕಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ವ್ಯಾಪಾರ ಹರಡುತ್ತಿದ್ದ ಹಾಗೆ, ಅದರ ಫಲವಾಗಿ, ಎರಡು ಸಮಸ್ಯೆಗಳು ಹುಟ್ಟಿಗೊಂಡಿವೆ - *ಜಾಗತಿಕ ಹವಾಮಾನದಲ್ಲಿ ವ್ಯತ್ಯಾಸ* ಹಾಗೂ *ನಿರಂತರ ಅಭಿವೃದ್ಧಿಯ* (Sustainable Development) ಬಗ್ಗೆ ಸಂದೇಹ. ಮನುಷ್ಯರ ನಿರಂತರ ಚಟುವಟಿಕೆಗಳಿಂದ ವಿಸರ್ಜಿತವಾಗುವ ಅನಿಲಗಳು ಸೂಕ್ಷ್ಮವಾಗಿ ಹವಾಮಾನದ ಮೇಲೆ ದುಷ್ಪರಿಣಾಮ ಬೀರಿ, ಜಾಗತಿಕ ತಾಪಮಾನ ಹೆಚ್ಚುತ್ತಿದೆ (global warming). ಇದು ಈಗ ನಾವು ಎದುರಿಸಬೇಕಾದ ಒಂದು ದೊಡ್ಡ ಸಮಸ್ಯೆಯಾಗಿದೆ. ಇಂಗಾಲಾಮ್ಲದ (Carbon dioxide) ಹೊರ ಸೂಸುವಿಕೆಯನ್ನು ಕಡಿಮೆ ಮಾಡುವುದು ಇದಕ್ಕಿರುವ ಒಂದೇ ಪರಿಹಾರ. ಇದಕ್ಕಾಗಿ ಮಾನವನು ತನ್ನ ಜೀವನ ಶೈಲಿಯನ್ನು ಬದಲಿಸಲೇ ಬೇಕಾದ ಕಾಲ ಈಗ ಒದಗಿಬಂದಿದೆ. ಆದರೆ, ದುರಂತವೆಂದರೆ, ಅಭಿವೃದ್ಧಿ ಹೊಂದಿದ ದೇಶಗಳು ಇದಕ್ಕೆ ತಯಾರಿಲ್ಲ. ಆದರೆ ಅವರು, ಅಭಿವೃದ್ಧಿಶೀಲ ದೇಶಗಳಿಂದ, ಈ ದಿಶೆಯಲ್ಲಿ ಹೆಚ್ಚಿನ ಪ್ರಯತ್ನಗಳನ್ನು ನಿರೀಕ್ಷಿಸುತ್ತಾರೆ. ಅದಲ್ಲದೆ, ನಮ್ಮ ದೇಶ ಈ ದಿಸೆಯಲ್ಲಿ ಮಾಡುತ್ತಿರುವ ಪ್ರಯತ್ನಗಳೂ ಅಲ್ಪವೇ. ಭಾರತದಂತಹ ಅಭಿವೃದ್ಧಿಶೀಲ ದೇಶಗಳು ಇದರಲ್ಲಿ ಅಭಿವೃದ್ಧಿ ಹೊಂದಿದ ದೇಶಗಳನ್ನೇ ಅನುಕರಣೆ ಮಾಡುತ್ತಿವೆ. ಈ ವಿಷಯದಲ್ಲಿ ನಮ್ಮ ದೇಶದ ಮನೋಭಾವ (mentality) ಅಭಿವೃದ್ಧಿ ಹೊಂದಿದ ದೇಶಗಳಿಗಿಂತ ಬೇರೆಯಾಗೇನೂ ಇಲ್ಲ. ಪ್ರಗತಿ ಎಂದರೆ ಏನು? *ನೈಸರ್ಗಿಕ ಸಂಪನ್ಮೂಲಗಳ ವಿಪರೀತ ಬಳಕೆ* ಮತ್ತು *ಅಧಿಕಾಧಿಕವಾಗುತ್ತಿರುವ ಉಪಭೋಗ* (usc of resources and ever increasing consumption) ಮಾತ್ರವೇ ಪ್ರಗತಿಯ ಮಾನದಂಡವಾಗದು. ಈ ವಿಚಾರವನ್ನು ಜಗತ್ತಿನ ಎಲ್ಲರೂ ಪುನರ್ವಿಮರ್ಶನೆ ಮಾಡುವುದು ಒಳಿತು.

ಪರಿಸರ ಮಾಲಿನ್ಯದ ಕಲುಷತೆ ಯಾವ ಅಡೆತಡೆಯೂ ಇಲ್ಲದೆ ಮುಂದುವರೆಯುತ್ತಿರುವುದಿಂದ, ಜಾಗತೀಕರಣವು ತಾನು ತಂದು ಕೊಡುವುದಾಗಿ ಘೋಷಿಸುವ ನಿರಂತರ ಅಭಿವೃದ್ಧಿಯ ಬಗ್ಗೆ ಪ್ರಶ್ನೆಗಳನ್ನು ಎತ್ತಬೇಕಾದ ಕಾಲ ಬಂದಿದೆ. ಅದಕ್ಕಾಗಿ 'ಕೊಳ್ಳುಬಾಕ ಸಂಸ್ಕೃತಿ' ಯನ್ನು ನಿಯಂತ್ರಿಸಿ, ಸರ್ವರಿಗೂ ನ್ಯಾಯ ಸಿಗುವ ರೀತಿಯಲ್ಲಿ, ಸೌಹಾರ್ದದ ವಾತಾವರಣ ನಿರ್ಮಿಸುವ ಅಗತ್ಯ ಇದೆ.

ಇದಕ್ಕಾಗಿ, ಸಮಷ್ಟಿ ಮಟ್ಟದಲ್ಲಿ ಬಡತನದ ನಿರ್ಮೂಲನ ಮತ್ತು ವೈಯಕ್ತಿಕ ಮಟ್ಟದಲ್ಲಿ ನಿಯಮಿತ ಜೀವನದ ಮಟ್ಟವನ್ನು ಕಂಡುಕೊಳ್ಳಬೇಕಾಗಿದೆ. ಮಾನವ ಜೀವನಕ್ಕೆ ಒಂದು ಉತ್ತಮ ಆಯಾಮವಿದೆ. ಭಾರತೀಯ ಅಧ್ಯಾತ್ಮ ಪರಂಪರೆ ಇದನ್ನು ಗುರುತಿಸಿದೆ. ಕಠೋಪನಿಷತ್ತಿನಲ್ಲಿ ಬರುವ ಒಂದು ಕಥೆಯ ಪ್ರಕಾರ, ಯಮನ ಹತ್ತಿರ ಆತ್ಮವಿದ್ಯೆಗಾಗಿ ನಚಿಕೇತನು ಪ್ರಾರ್ಥಿಸುತ್ತಾನೆ. ಆಗ ಯಮನು ಜಗತ್ತಿನಲ್ಲಿ ದುರ್ಲಭವಾದಂತಹ ಭೋಗಗಳನ್ನು, ಕಾಮನೆಗಳನ್ನು ಬೇಕಾದರೆ ಕೇಳಿಕೋ, ಕೊಡುತ್ತೇನೆ ಎನ್ನುತ್ತಾನೆ. ಆಗ ನಚಿಕೇತ ಹೀಗೆ ಹೇಳುತ್ತಾನೆ:

**"ಓ ಯಮನೆ, ನೀನು ಕೊಡುತ್ತೇನೆಂದು ಹೇಳಿದ ಆ ಎಲ್ಲ ಕಾಮನೆಗಳೂ ನಾಳೆಗೆ ಇರುವಂಥಹುವಲ್ಲ (ಅನಿತ್ಯವಾದುವುಗಳು). ಅದಲ್ಲದೆ ಅವು ಇಂದ್ರಿಯಗಳ ಶಕ್ತಿಯನ್ನು ಕುಗ್ಗಿಸಿ ಬಿಡುತ್ತವೆ. ಅದಲ್ಲದೆ, ಇಡೀ ಜೀವನವೇ ಅಲ್ಪಕಾಲಿಕವಾದುದು. ಆದ್ದರಿಂದ, ನೀನು ನನಗೆ ಕೊಡಬೇಕೆಂದಿರುವ ರಥ, ನೃತ್ಯ, ಗೀತೆಗಳನ್ನೆಲ್ಲ ನೀನೇ ಇಟ್ಟುಕೋ. ಕೇವಲ ಧನಸಂಪತ್ತಿನಿಂದ ಮನುಷ್ಯನು ಶಾಶ್ವತವಾದ ತೃಪ್ತಿಯನ್ನು ಹೊಂದಲು ಸಾಧ್ಯವಿಲ್ಲ......"** (ಕಠೋಪನಿಷತ್ I.I. 26-27)

ಮಾನವನ ಅಭಿವೃದ್ಧಿಯನ್ನು ಕೇವಲ ಸಾಮಾಜಿಕ ಅಥವಾ ಆರ್ಥಿಕ ಆಕಾಂಕ್ಷೆಗಳಿಂದ ಸಾಧಿಸಲು ಆಗುವುದಿಲ್ಲ. ಆದ್ದರಿಂದಲೇ ಸಾಮಾಜಿಕ ಮತ್ತು ಆರ್ಥಿಕ ಮೇಲ್ಮೆಯ ಆಕಾಂಕ್ಷೆಯು ಮಾನವನ ಆಧ್ಯಾತ್ಮಿಕ ಉನ್ನತಿಗೂ ಪೂರಕವಾಗಿರಬೇಕೆಂದು ಭಾರತೀಯ ಪರಂಪರೆಯು ಇಡೀ ವಿಶ್ವಕ್ಕೆ ಬೋಧಿಸುತ್ತದೆ.

ಜಾಗತಿಕ ಸಂಪನ್ಮೂಲಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂಬ ಬಗ್ಗೆ ಈಶಾವಾಸ್ಯ ಉಪನಿಷತ್ತಿನಿಂದ ನಾವು ತಿಳುವಳಿಕೆ ಪಡೆಯಬಹುದಾಗಿದೆ.

"ಈ ಪ್ರಪಂಚದಲ್ಲಿರುವ ಎಲ್ಲವೂ ಪರಮಾತ್ಮನಿಂದ ಆವೃತವಾಗಿದೆ ಎಂದು ಭಾವಿಸಿಕೊಂಡು, ಅವುಗಳಲ್ಲಿ ಆಸಕ್ತಿ ಇಲ್ಲದೆ, ತ್ಯಾಗಬುದ್ಧಿಯಿಂದ ಅನುಭವಿಸು. ಇತರರ ಐಶ್ವರ್ಯಕ್ಕೆ ಆಸೆ ಪಡಬೇಡ." (*ಈಶಾವಾಸ್ಯ ಉಪನಿಷತ್*, ೧.೧)

ಕೆಟ್ಟ ಆಸೆ ಇಲ್ಲದೆ ಮತ್ತು ಮುಂದಿನ ಪೀಳಿಗೆಯವರಿಗೆ ವಂಚನೆ ಮಾಡದೆ ಜಗತ್ತಿನ ಸಂಪನ್ಮೂಲಗಳ ಜವಾಬ್ದಾರಿಯುತವಾದ ಬಳಕೆ ಮಾಡಬೇಕೆಂಬುದೇ ಭಾರತೀಯ ಪರಂಪರೆಯು ಮಾನವತೆಗೆ ನೀಡುವ ಸಂದೇಶ.

'ಜಗತ್ತಿನಲ್ಲಿ ಎಲ್ಲರ ಅಗತ್ಯ ಪೂರೈಸುವಷ್ಟು ಸಂಪನ್ಮೂಲಗಳಿವೆ. ಆದರೆ ಎಲ್ಲರ ಆಸೆಗೆ ಸಾಕಾಗುವಷ್ಟಿಲ್ಲ' ಎಂಬ ಮಹಾತ್ಮ ಗಾಂಧೀಜಿಯವರ ಸಂದೇಶವು ಪರಿಸರವನ್ನು ಕಾಪಾಡುವಲ್ಲಿ ಪರಿಣಾಮಕಾರಿ ಸಾಮಾಜಿಕ ನೈತಿಕ ನಿಯಮವಾಗಬೇಕು.

**ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ** – ಈ ಎಲ್ಲ ಚತುರ್ವಿಧ ಪುರುಷಾರ್ಥಗಳನ್ನೂ ಭಾರತೀಯ ಪರಂಪರೆ ಅಂಗೀಕರಿಸಿದೆ. ಅದು ಮಿತ ಮತ್ತು ಯಥೋಚಿತ ( temperate) ಜೀವನವನ್ನು ಬೋಧಿಸುತ್ತದೆ.

"ಯುಕ್ತವಾದ ಆಹಾರ, ವಿಹಾರಗಳನ್ನು ಅನುಸರಿಸುವವನಿಗೆ ಮತ್ತು ಕರ್ಮಗಳಲ್ಲಿ ಯುಕ್ತವಾಗಿ ಪ್ರಯತ್ನ ಮಾಡುವವನಿಗೆ ಹಾಗೂ ಯುಕ್ತವಾಗಿ ನಿದ್ರೆ ಮತ್ತು ಎಚ್ಚರದ ಅವಸ್ಥೆಗಳನ್ನು ಅನುಸರಿಸುವವನಿಗೆ, ದುಃಖ ನಾಶಮಾಡುವಂತಹ ಯೋಗವು ಸಿದ್ಧಿಸುತ್ತದೆ" ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಉಪದೇಶಿಸುತ್ತಾನೆ. (*ಭಗವದ್ಗೀತೆ*, ೬. ೧೭)

ಮೇಲಿನ ಎಚ್ಚರಿಕೆಯ ನುಡಿಗಳು ಪರಸ್ಪರ ಅವಲಂಬಿಗಳಾದ ಜೀವಿಗಳೇ ತುಂಬಿರುವ ಈ ನಮ್ಮ ಜಗತ್ತಿಗೆ ಮಾರ್ಗದರ್ಶಿಯಾಗಬೇಕು. ಆಗ ಮಾತ್ರ ನಾವು ಜಾಗತೀಕರಣದ ಅನೇಕಾನೇಕ ಪ್ರಭಾವಗಳ ಜೊತೆಗೆ ಹೊಂದಿಕೊಂಡು ಬಾಳಲು ಸಾಧ್ಯ. ■

## ತಂತ್ರಜ್ಞಾನದ ಸಾಧಕ ಬಾಧಕಗಳು

ಅತಿಯಾದ ತಂತ್ರಜ್ಞಾನದ ಅಭಿವೃದ್ಧಿಯು ಮನುಷ್ಯ ದೈಹಿಕವಾಗಿಯೂ, ಮಾನಸಿಕವಾಗಿಯೂ ರೋಗಿಷ್ಠನಾಗುವಂಥ ವಾತಾವರಣವನ್ನು ಸೃಷ್ಟಿಸಿದೆ. ಅಭಿವೃದ್ಧಿ ಮತ್ತು ಬೆಳವಣಿಗೆಯ ಹುಚ್ಚು ಹಿಡಿದ ಅರ್ಥ ವ್ಯವಸ್ಥೆ, ಉತ್ಪಾದನೆಯನ್ನು ಹೆಚ್ಚಿಸಲು ತನ್ನ ಸಕಲ ಉನ್ನತ ತಂತ್ರಜ್ಞಾನವನ್ನೂ ನಿರಂತರವಾಗಿ ಪ್ರಯೋಗ ಮಾಡುತ್ತಿದೆ. ಇಂಥ ವ್ಯವಸ್ಥೆಯ ಅನಿವಾರ್ಯ ಶಿಶುಗಳೇ ಇಂದಿನ ಎಲ್ಲ ಸಮಸ್ಯೆಗಳು. ಮನುಕುಲದ ಮುಂದೆ ಇರುವ ಸಮಸ್ಯೆಗಳು ಕೇವಲ ವಿಜ್ಞಾನ ತಂತ್ರಜ್ಞಾನಗಳಿಂದಲೇ ಬಗೆಹರಿಯುವಂಥವಲ್ಲ ಎಂಬುದನ್ನು ನಾವು ಅರಿತುಕೊಳ್ಳಬೇಕು. ರಾಕ್ಷಸಾಕಾರವನ್ನು ತಳೆಯುತ್ತಿರುವ ಈ ಸಮಸ್ಯೆಗಳನ್ನು ಬಿಡಿಸಲು ರಾಜಕೀಯ ಇಚ್ಛಾಶಕ್ತಿ ಹಾಗೂ ಜನಜಾಗೃತಿ ಅತ್ಯವಶ್ಯ.

ಅಭಿವೃದ್ಧಿಶೀಲ ದೇಶಗಳಲ್ಲಿನ ಬುದ್ಧಿವಂತರು, ನೀತಿನಿರ್ಣಯಕಾರರು ಮತ್ತು ರಾಜಕೀಯ ನಾಯಕರು ವಿದೇಶಿ ಶಿಕ್ಷಣ ಪಡೆದು ಪಾಶ್ಚಾತ್ಯ ವಿಚಾರಗಳನ್ನು, ತಂತ್ರಜ್ಞಾನವನ್ನು ಅವಲಂಬಿಸಿ ತಮ್ಮದೇ ಸ್ವಂತ ಸಾಮಾಜಿಕ–ಸಾಂಸ್ಕೃತಿಕ ನೆಲೆಗಳಿಂದ ದೂರವಾದರೆ ಮತ್ತು ಆ ದೇಶಗಳಲ್ಲಿಯೆ ಸುಲಭವಾಗಿ ಒಪ್ಪಿತವಾಗದಿರುವ ಆಧುನಿಕ ವಿಧಾನಗಳನ್ನು ಬಲವಂತವಾಗಿ ತಮ್ಮ ದೇಶಗಳಲ್ಲಿ ಹೇರಲು ಯತ್ನಿಸಿದರೆ ಸಮಸ್ಯೆ ಮತ್ತೂ ಗಂಭೀರವಾದೀತು.

ವ್ಯಕ್ತಿಯ ಘನತೆಯೆ ಸಾತಂತ್ರ್ಯದ ತಿರುಳು, ಅದನ್ನೇ ಭಾವರಹಿತವನ್ನಾಗಿ ನಾಶಮಾಡಲು ಹೊರಟಂತಿದೆ ವಿಜ್ಞಾನ, ತಂತ್ರಜ್ಞಾನದ ಮುನ್ನಡೆ. ಈಗ ನಿರ್ಣಾಯಕ ಸಮಯ ಬಂದಿದೆ. ಕೆಟ್ಟದ್ದನ್ನು ಅಡಗಿಸಲು ಮಾನವನ ಸಮಸ್ತ ಒಳಿತೂ ಸಜ್ಜಾಗಬೇಕು. ದಡ್ಡತನ ಮತ್ತು ವಿಚಾರಾಂಧತೆಗಳನ್ನು ವಿವೇಕ ಮತ್ತು ಜ್ಞಾನ ಗೆಲ್ಲಬೇಕು. ಸ್ವಾರ್ಥದೃಷ್ಟಿಯಿಂದ ಸುಳ್ಳು ನಿರ್ಣಯಕ್ಕೆ ಬರುವವರಿಂದ ದೂರವಾಗಬೇಕು. ಕಂಪ್ಯೂಟರ್ ಮೇಲಿನ ಅವಲಂಬನೆ, ಸಾಫ್ಟ್‌ವೇರ್, ಸ್ವಯಂಚಾಲನೆ, ಕೃತಕ ಬೌದ್ಧಿಕತೆ ಇತ್ಯಾದಿಗಳೇ ಜಗತ್ತಿನಲ್ಲಿ ಸಕಲವೂ ಆದರೆ, ಮಾನವನ ಅನುಭವ, ಸಾಮರ್ಥ್ಯ, ಬುದ್ಧಿಮತ್ತೆ ಇವುಗಳಿಗೆ ಯಾವುದೇ ಸ್ಥಾನವಿರುವುದಿಲ್ಲ. ಕೊನೆಗೆ ಮಾನವನ ಮನಸ್ಸೇ ಸ್ಥಗಿತವಾದರೂ ಆಶ್ಚರ್ಯವಿಲ್ಲ. ಎಲ್ಲ ಸಾಧನ, ಎಲ್ಲ ವಿಧಾನಗಳೂ ಹೊರಗಿನಿಂದಲೇ ಬಂದರೆ, ಸ್ಥಳೀಯವಾದುದೆಲ್ಲ ನಾಶವಾದೀತು.

ಗಾಂಧೀಜಿ ಹೇಳಿದರು, "ನಾನು ವಿರೋಧಿಸುವುದು ಯಂತ್ರವನ್ನಲ್ಲ ಯಂತ್ರದ ಹುಚ್ಚನ್ನು, ಶ್ರಮವನ್ನು ಉಳಿಸುತ್ತಲೇ ಹೋದರೆ, ದುಡಿಯುವ ಕೈಗಳಿಗೆ ಏನು ಕೆಲಸ ಉಳಿದೀತು? ಉಪವಾಸವೇ ಗತಿ. ಸಮಯ ಮತ್ತು ಶ್ರಮದ ಉಳಿತಾಯ ಕೆಲವೇ ಜನರಿಗೆ ದೊರೆತರೆ ಸಾಲದು, ಎಲ್ಲರಿಗೂ ದೊರಕಬೇಕು. ಸಂಪತ್ತು ಕೆಲವೇ ಕೈಗಳಲ್ಲಿ ನಿಲ್ಲಬಾರದು. ಎಲ್ಲರ ಕೈಗೂ ತಲುಪಬೇಕು. ಕೆಲವೇ ಜನ ಲಕ್ಷಾಂತರ ಜನರ ಬೆನ್ನು ಏರಿ ಸವಾರಿ ಮಾಡಲು ಇಂದಿನ ಯಂತ್ರ ಸಾಧಕವಾಗಿದೆ. ಇದರ ಹಿಂದಿನ ಪ್ರಚೋದನೆ ಶ್ರಮ ಉಳಿಸುವ ಔದಾರ್ಯವಲ್ಲ." ತಂತ್ರಜ್ಞಾನದ ಬಗ್ಗೆ ಗಾಂಧೀಜಿ ದೃಷ್ಟಿಯ ಅಂಶಗಳು ಹೀಗಿವೆ ಎನ್ನಬಹುದು: ೧. ಯಂತ್ರ ಮಾನವನ ಉದ್ಯೋಗವನ್ನು ಕಿತ್ತುಕೊಳ್ಳಬಾರದು. ೨. ಹಳ್ಳಿಗಳ ಶೋಷಣೆ ಆಗಬಾರದು. ೩. ಗ್ರಾಮ ಕುಶಲಕರ್ಮಿಯ ಶ್ರಮಭಾರವನ್ನು ತಗ್ಗಿಸಲಿ, ದಕ್ಷತೆಯನ್ನು ಹೆಚ್ಚಿಸಲಿ. ೪. ಮಾನವನ ಮಿತಿಗಳನ್ನು ಕೆಡಿಸಬಾರದು. ೫. ಕೆಲವೇ ಕೈಗಳಲ್ಲಿ ಸ್ವತ್ತು–ಸತ್ತೆಗಳ ಸ್ವಾಮ್ಯ ಸಂಗ್ರಹವಾಗಬಾರದು. ೬. ಭಾರಿ ಬಂಡವಾಳ ಅಥವಾ ಭಾರಿ ಸಂಖ್ಯೆಯ ಉದ್ಯೋಗಿಗಳು ಇದ್ದಲ್ಲಿ, ಅಂತಹ ಉದ್ಯಮ ಸರ್ಕಾರದ ಅಧೀನದಲ್ಲಿರಬೇಕು, ಜನಹಿತಕ್ಕಾಗಿಯೆ ನಡೆಯಬೇಕು.೭.ಮೇಲಾಗಿ ಜೀವನಾವಶ್ಯಕ ವಸ್ತುಗಳ ವಿಷಯದಲ್ಲಿ ಹಳ್ಳಿಗಳನ್ನು ಸ್ವಾವಲಂಬಿ ಮಾಡುವಂತಿರಬೇಕು. **(ಮೂಲ ಲೇಖನದ ಸಂಗ್ರಹ)**

**ಲೇಖಕರು: ಜಿ.ಎಸ್. ಮಾಥೂರ್. ಅನುವಾದ: ನೀಲತ್ತಹಳ್ಳಿ ಕಸ್ತೂರಿ**

**( ಕೃಪೆ: *'ಜನಪದ ವಿಚಾರ'*)**